# ತೃಣಮಪಿ ನ ಚಲತಿ

ಮನೆಯ ತಲೆಬಾಗಿಲ ಪಕ್ಕದಲ್ಲಿ ಅತಿಥಿಗಳು ಕೂರುವ ಸಣ್ಣ ಮೊಗಸಾಲೆ. ಕಾಯುತ್ತಾ ಕುಳಿತಿದ್ದವರು ನಾಲ್ಕೈದು ಮಂದಿ. ಕೆಲವರು ಪದೇಪದೇ ಗಡಿಯಾರ ನೋಡಿಕೊಳ್ಳಲು ಕಾರಣವಿತ್ತು. ನಿಧಾನಕ್ಕೆ ತೆರೆದುಕೊಂಡ ಲಿಫ್ಟಿನ ಬಾಗಿಲಿನಿಂದ ಹೊರಬಂದ ಆ ನಟ ಬಲಗೈಲಿದ್ದ ಟವೆಲ್‌ನಿಂದ ತಲೆ ಒರೆಸಿಕೊಳ್ಳುತ್ತಾ ಅತಿಥಿಗಳ ಮೊಗಸಾಲೆಯನ್ನು ಒಮ್ಮೆ ವಾರೆಗಣ್ಣಿನಿಂದ ನೋಡಿದವರೇ ನಡುಮನೆಗೆ ಹೋಗಿ ಕುಳಿತರು. ಟೀವಿ ಚಾಲೂ ಆಯಿತು. ನಿರಂತರ ಸುದ್ದಿಯ ಸದ್ದು.

ಅತಿಥಿಗಳ ಮೊಗಸಾಲೆಯಲ್ಲಿ ಕೆಲವು ಅಭ್ಯಾಗತರೂ ಇದ್ದರೆನ್ನಿ. 'ಒಂದೂವರೆ ಗಂಟೆ ಆಯಿತು' ಎಂದು ಒಬ್ಬರು ಮೆಲುದನಿಯಲ್ಲಿ ಗೊಣಗಿದರು. ಇನ್ನೊಬ್ಬರ ಬಾಯಿಂದ 'ಲೊಚ್' ಎಂಬ ಬೇಸರದ ಸದ್ದು. ನಟನ ಅಸಿಸ್ಟೆಂಟ್ ಬಂದವರೇ, 'ಅಣ್ಣಾವ್ರು ಟಿಫನ್ ಮಾಡ್ತಾರೆ. ಆಮೇಲೆ ಸಿಗ್ತಾರೆ. ಏನ್ ತಗೋತೀರಾ' ಎಂದು ಪ್ರಶ್ನೆ ಹಾಕಿದರು. ಸಹಜ ವಿನಯದಿಂದ ಎಲ್ಲರೂ ಏನೂ ಬೇಡ ಎಂದರೂ ಒಬ್ಬರು ಮಾತ್ರ ಲೋಟ ನೀರನ್ನು ಕೇಳಿದರು. ಹತ್ತು ನಿಮಿಷ ಕಳೆದ ಮೇಲೆ ನೀರು ಬಂತು. 'ನೀರು ಕುಡಿಸೋದು ಅನ್ನೋದು ಇದನ್ನೇ' ಎಂದು ಅಲ್ಲಿದ್ದ ಇಬ್ಬರು ಪರಸ್ಪರ ಕಿಚಾಯಿಸಿಕೊಂಡು ಹುಳ್ಳಗೆ ನಗೆ ನಕ್ಕರು.

ಗಡಿಯಾರದ ಮುಳ್ಳೂ ಮುನ್ನಡೆಯುತ್ತಿತ್ತು. ನಟನ ಟಿಫಿನ್ ಮುಗಿಯಲಿಲ್ಲ. ಇದ್ದಕ್ಕಿದ್ದಂತೆ ಸಿನಿಮಾ ಸಂಘವೊಂದರ ಪದಾಧಿಕಾರಿಗಳ ದಂಡು, ಬೆನ್ನಲ್ಲೇ ಮೈಕು ಹಿಡಿದ ಕೆಲವು ಟೀವಿ ಸುದ್ದಿಮಿತ್ರರ ತಂಡ ಬಂತು. ಇನ್ನೊಂದು ದೊಡ್ಡ ಅತಿಥಿಗೃಹದಲ್ಲಿ ಅವರೆಲ್ಲಾ ಆಸೀನರಾದರು. ಅರ್ಧ ತಾಸು ಸರಿದ ಮೇಲೆ ನಟ ಮೆಲ್ಲನೆ ಅಡಿಯಿಡುತ್ತಾ, ಕೆಂಪು ಕಣ್ಣುಗಳನ್ನು ಅತ್ತಿತ್ತ ಆಡಿಸುತ್ತಾ, 'ತಲೆ ಒಣಗಬೇಕು. ಆಮೇಲಷ್ಟೇ ನಿಮ್ಮ ಜೊತೆ ಫೋಟೋ' ಎಂದು ಹೇಳಿದ್ದೇ ಟಿಫನ್ ಕೋಣೆಯತ್ತ ಮರಳಿದರು. ಮೊದಲೇ ಕಾಯುತ್ತಾ ಕುಳಿತಿದ್ದವರತ್ತ ವಾರೆನೋಟ ಬೀರಿ, ಮಂದಹಾಸದ ರುಜು... ಆಮೇಲೆ ಸಂಘದ ಪದಾಧಿಕಾರಿಗಳಿಂದ ಹಾರ–ತುರಾಯಿ ವಿನಿಮಯ, ಗ್ರೂಪ್ ಫೋಟೋ ಸೆಷನ್ನು, ಅಭಿಪ್ರಾಯ ಹಂಚಿಕೆ ಎಲ್ಲವೂ ನಡೆಯಿತು.

ಎಲ್ಲಾ ಮುಗಿಸಿ ಹೊರಬಂದ ನಟ ಗಂಟೆಗಟ್ಟಲೆ ಕಾದು ಕುಳಿತವರಿಗೆ, 'ನಾಳೆ ಬನ್ನಿ. ನಾನೀಗ ಯಾವುದೋ ಫಂಕ್ಷನ್‌ಗೆ ಹೋಗಬೇಕು. ಅಲ್ಲಿ ಒಂದೂವರೆ ಗಂಟೆಯಿಂದ ಕಾಯುತ್ತಿದ್ದಾರೆ' ಎಂದುಬಿಟ್ಟರು. ಅತಿಥಿಗಳ ಮುಖ ಪೆಚ್ಚಾಯಿತು. ಮರುದಿನ ಅದೇ ಮನೆ ಮುಂದೆ ಅವರೇ. ಗೇಟಿನ ಒಳಕ್ಕೆ ಪ್ರವೇಶ ಕೂಡ ಸಿಗಲಿಲ್ಲ. ನಟ ಮನೆಯಿಂದ ಹೊರಗಿದ್ದಾರೆಂಬ ಉತ್ತರ ಸೆಕ್ಯುರಿಟಿ ಗಾರ್ಡ್‌ನಿಂದ ಬಂತು.

ಹೀಗೆ ಸಮಯವನ್ನು ತಮ್ಮಿಷ್ಟಕ್ಕೆ ಬಗ್ಗಿಸಿಕೊಂಡು ವರ್ಷಗಳಿಂದ ಬದುಕುತ್ತಿರುವ ನಟನಿಗೆ ತಮ್ಮ ಆಪ್ತಮಿತ್ರನಂತೆ ರಾಜಾಮೀಸೆ ಇಟ್ಟುಕೊಂಡು ಅಭಿನಯಿಸುವುದಿಷ್ಟ. ಹೆಂಡತಿಗೆ ಬರುವಷ್ಟು ಇಂಗ್ಲಿಷ್ ಬರುವುದಿಲ್ಲ. ಮಗ ಇಂಗ್ಲಿಷ್ ಶಾಲೆಯಲ್ಲಿ ಕಲಿತದ್ದರ ಕುರಿತು ಹೆಮ್ಮೆ. ಇನ್ಫೋಸಿಸ್ ನಾರಾಯಣ ಮೂರ್ತಿ ಬಂದಮೇಲೆ ನಾಡು ಉದ್ಧಾರವಾಯಿತೆಂಬುದು ಭಾವನೆ. ಇಂಗ್ಲಿಷ್ ಶಾಲೆಗಳನ್ನು ಮುಚ್ಚಿದರೆ ಮುಚ್ಚಲಿ ಬಿಡಿ ಎಂಬುದು ಕಳಕಳಿ.

ಅಂದಹಾಗೆ, ಒಂದು ಕಾಲದಲ್ಲಿ ನಷ್ಟ ಅನುಭವಿಸಿದ ನಿರ್ಮಾಪಕರಿಗೆಲ್ಲಾ ಕಾಲ್‌ಷೀಟ್ ಕೊಟ್ಟು ಕರ್ಣನೆಂದೇ ಬಿರುದು ಗಳಿಸಿದ್ದ ಅವರು ಈಗಲೂ ವಸೂಲಿಗೆ ನಿಂತರೆ ಎಂಟು ಕೋಟಿ ರೂಪಾಯಿ ಸಂಭಾವನೆ ಬಾಕಿ ಬರಬೇಕಂತೆ. ಆ ನಟನ ಬದುಕನ್ನೇ ಆಧರಿಸಿ ಒಂದು ಸಿನಿಮಾ ಮಾಡಬಹುದಲ್ಲವೇ?

–ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68